ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:31-05-2021ರ ನಡವಳಿಗಳು

ವಿಷಯದ ಸಂಖ್ಯೆ: 123 /2021-22

ಪ್ರಸ್ತಾವನೆ :

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಾಸರಹಳ್ಳಿ ಕ್ಷೇತ್ರ ವ್ಯಾಪ್ತಿಯಲ್ಲಿ ಮಾನ್ಯ ಕಂದಾಯ ಇಲಾಖೆ ಸಚಿವರು ರವರ ಪತ್ರ ಸಂಖ್ಯೆ:ಕಂ.ಇ.ಸ/193/2020-21, ದಿನಾಂಕ:01.08.2020 ರಲ್ಲಿ ಮಾನ್ಯ ಕಂದಾಯ ಸಚಿವರು ಸನ್ಮಾನ್ಯ ಮುಖ್ಯ ಮಂತ್ರಿ ರವರಿಗೆ ಮನವಿ ಸಲ್ಲಿಸಿ 2020-21 ನೇ ಸಾಲಿನ ಆಯವ್ಯಯದ ಮಾನ್ಯ ಮುಖ್ಯ ಮಂತ್ರಿಗಳಿಗೆ ವಿವೇಚನೆಗೆ ಒಳಪಟ್ಟ ಕಾಮಗಾರಿಗಳ ಲೆಕ್ಕ ಶೀರ್ಷಿಕೆ P-3075 ಅಡಿಯಲ್ಲಿ Widening and comprehensive development of Abbigere main road from Renaissance Woods Apartment to Abbigere Park ಕಾಮಗಾರಿಯನ್ನು ರೂ.950.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಅನುದಾನ ಬಿಡುಗಡೆ ಮಾಡಲು ಕೋರಿದ್ದು, ಮಾನ್ಯ ಮುಖ್ಯ ಮಂತ್ರಿಗಳು ಆಯುಕ್ತರು ಬಿಬಿಎಂಪಿ-ಅನುದಾನ ಬಡುಗಡೆ ಮಾಡಿ ಜಾಬ್ ಕೋಡ್ ನೀಡಲು ಆದೇಶಿಸಿದೆ ಎಂದು ಮನವಿ ಪತ್ರದ ಮೇಲೆ ಸಹಿ ಮಾಡಿರುವಂತೆ 2020-21 ನೇ ಸಾಲಿನ ಆಯವ್ಯಯದ ಲೆಕ್ ಶೀರ್ಷಿಕೆ P-3075 ಅಡಿಯಲ್ಲಿ (Special development works in Bengaluru City (Bengaluru City incharge minister Discretionary Grants) ಅಡಿಯಲ್ಲಿ ರೂ.550.00 ಲಕ್ಷಗಳಿಗೆ ಜಾಬ್ ಸಂಖ್ಯೆ:012-21-000003 ನ್ನು ನೀಡಲಾಗಿದೆ.

ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು 2018-19 ನೇ ಸಾಲಿನ ಲೋಕೊಪಯೋಗಿ ಇಲಾಖೆ ದರ ಪಟ್ಟಿ ಹಾಗೂ ಅನುಮೋದಿತ ದರಗಳಂತೆ ರೂ.950.00 ಲಕ್ಷಗಳಿಗೆ ತಯಾರಿಸಿ ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರಿಂದ ತಾಂತ್ರಿಕ ಮಂಜೂರಾತಿಯನ್ನು ಪಡೆಯಲಾಗಿದೆ.

ಸದರಿ ಕಾಮಗಾರಿಯನ್ನು ಸಾರ್ವಜನಿಕ ಸೇವಾ ಹಿತ ದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ದಾಸರಹಳ್ಳಿ ವಿಭಾಗ ರವರು ಟೆಂಡರ್ ಪ್ರಕಟಣೆ ಸಂಖ್ಯೆ: EE/RI/Dhalli/TEND/2/2020-21, ದಿನಾಂಕ:21.11.2020 ರಲ್ಲಿ ಅಲ್ಪಾವಧಿ ಟೆಂಡರ್‌ನ್ನು ಅಹ್ವಾನಿಸಲಾಗಿತ್ತು.

ಸದರಿ ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ:25.03.2021 ರಂದು ತೆರೆಯಲಾಗಿದ್ದು ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ನಾಲ್ಕು ಜನ ಗುತ್ತಿಗೆದಾರರು ಭಾಗವಹಿಸಿದ್ದು, ತಾಂತ್ರಿಕವಾಗಿ ಅರ್ಹರಾಗಿದ್ದ ಗುತ್ತಿಗೆದಾರರಾದ KUDULUR PRASAD DINESHKUMAR (SRI CHOWDESHWARI CONCRETE INDIA PRIVATE LIMITED) ಮತ್ತು K T RAVI (K T R CONSTRUCTIONS)ರವರ ಆರ್ಥಿಕ ಬಿಡ್‌ಗಳನ್ನು ತೆರೆಯಲು ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರು ಅನುಮೋದಿಸಿರುವಂತೆ ದಿನಾಂಕ:25.03.2021 ರಂದು ಆರ್ಥಿಕ ಬಿಡ್ ಅನ್ನು ತೆರೆಯಲಾಗಿದ್ದು ವಿವರ ಕೆಳಕಂಡಂತೆ ಇರುತ್ತದೆ.

SL. No	Bidders Name	Amount to put Tender (in Rs.)	Amount As per issue Rate Dated 01.01.2021 (in Rs.)	Contractor Quoted Amount (in Rs.)	% as per estimate Amount	% as per issue rates Amount	Remarks
1	KUDULUR PRASAD DINESHKUMAR (SRI CHOWDESHWARI CONCRETE INDIA PRIVATE LIMITED)	78382522.94	78028731.65	81515513.42 excluding GST	4.00% Above	4.47% Above	L1
2	K T RAVI (K T R CONSTRUCTIONS)			82599091.60 excluding GST	5.38% Above	5.86% Above	L2

ಮೇಲ್ಕಂಡ ತುಲನಾತ್ಮಕ ಪಟ್ಟಿಯಂತೆ ಗುತ್ತಿಗೆದಾರರಾದ KUDULUR PRASAD DINESHKUMAR (SRI CHOWDESHWARI CONCRETE INDIA PRIVATE LIMITED) ರವರು ರೂ.81515513.42 (Excluding GST) ಮೊತ್ತಕ್ಕೆ ಟೆಂಡರ್‌ನ್ನು ಸಲ್ಲಿಸಿದ್ದು L1 ಗುತ್ತಿಗೆದಾರಾಗಿದ್ದು, ಮಂಜೂರಾತಿ ದರಗಳ ಮೇಲೆ ಶೇಕಡ 4.00 ರಷ್ಟು ಹೆಚ್ಚುವರಿ ಹಾಗೂ ದಿನಾಂಕ: 01.01.2021 ರ (issue rates) ದರಗಳಿಗೆ ಹೋಲಿಸಿದಾಗ ಶೇಕಡ 4.47 ರಷ್ಟು ಹೆಚ್ಚುವರಿಯಾಗಿರುತ್ತದೆ.

ಸದರಿ ಕಾಮಗಾರಿಯನ್ನು ಸಾರ್ವಜನಿಕ ಸೇವಾ ದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಈ ಕೆಳಕಂಡ ಅಂಶಗಳಿಗೆ ಅನುಮೋದನೆಯನ್ನು ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:12-05-2021ರ ಟಿಪ್ಪಣಿ.

1. ಕಾಮಗಾರಿಯ ಅಂದಾಜು ಮೊತ್ತ ರೂ.950.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಟೆಂಡರ್ ಅಹ್ವಾನಿಸಿರುವುದರಿಂದ ಘಟನೋತ್ತರ ಆಡಳಿತಾತ್ಮಕ ಅನುಮೋದನೆ.
2. L1 ಗುತ್ತಿಗೆದಾರರಾದ KUDULUR PRASAD DINESHKUMAR (SRI CHOWDESHWARI CONCRETE INDIA PRIVATE LIMITED) ರವರು ರೂ.81515513.42 (Excluding GST) ಮೊತ್ತಕ್ಕೆ ಟೆಂಡರ್‌ನ್ನು ಸಲ್ಲಿಸಿದ್ದು ಮಂಜೂರಾತಿ ದರಗಳ ಮೇಲೆ ಶೇಕಡ 4.00% ರಷ್ಟು ಹೆಚ್ಚುವರಿ ಹಾಗೂ ದಿನಾಂಕ:01.01.2021 ರ (issue rates) ದರಗಳಿಗೆ ಹೋಲಿಸಿದಾಗ ಶೇಕಡ 4.47%ರಷ್ಟು ಹೆಚ್ಚುವರಿ ದರಗಳ ಟೆಂಡರ್ ಅನುಮೋದನೆ.

ತೀರ್ಮಾನ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:12-05-2021ರ ಟಿಪ್ಪಣಿಯನ್ನು ಒಪ್ಪಿದೆ.

(ರಾಕೇಶ್ ಸಿಂಗ್)
ಆಡಳಿತಗಾರರು